# ಜಗನ್ಮೋಹಿನಿ

## ಎಳು ದಶಕಗಳ ಹಿಂದಿನ ಸುಂದರ ಸ್ವಪ್ನ

ಡಿ. ಶಂಕರ್‌ಸಿಂಗ್ ನಿರ್ಮಾಣದ 'ಜಗನ್ಮೋಹಿನಿ' ತೆರೆ ಕಂಡ ಸಂದರ್ಭದಲ್ಲಿ ದೊಡ್ಡ ಮಟ್ಟದ ಸಂಚಲನೆ ಹುಟ್ಟಿಸಿತ್ತು. ತಾಂತ್ರಿಕ ಚಮತ್ಕಾರಗಳಿಂದ ನೋಡುಗರನ್ನು ರೋಮಾಂಚನಗೊಳಿಸಿತ್ತು. ಎಪ್ಪತ್ತು ವರ್ಷಗಳ ಹಿಂದೆ ತೆರೆಕಂಡ ಚಿತ್ರವನ್ನು ಮೈಸೂರಿನ ಪದ್ಮಾ ಶ್ರೀರಾಮ 'ಸುಧಾ' ಓದುಗರಿಗಾಗಿ ನೆನಪಿಸಿಕೊಂಡಿದ್ದಾರೆ.

ಇಂದಿನ ಕನ್ನಡ ಚಿತ್ರರಂಗದ ಮುನ್ನಡೆ, ಊಹಿಸಲಸಾಧ್ಯವಾದ ತಾಂತ್ರಿಕತೆ ಇವುಗಳನ್ನು ಗಮನಿಸಿದಾಗ ಸುಮಾರು ಎಪ್ಪತ್ತು ವರ್ಷಗಳ ಹಿಂದಿನ 'ಜಗನ್ಮೋಹಿನಿ' (1951) ಚಿತ್ರ ನೆನಪಾಗುತ್ತಿದೆ. ಇಂದಿನಷ್ಟು ಸೌಲಭ್ಯಗಳು ಇಲ್ಲದಿದ್ದ ಆ ಕಾಲದಲ್ಲಿ ತಯಾರಾದ ಅಚ್ಚ ಕನ್ನಡ ಚಿತ್ರವಾದ 'ಜಗನ್ಮೋಹಿನಿ' ಸಿನಿಮಾ ಮತ್ತು ಅದರ ನಿರ್ಮಾಪಕರಾದ ಶಂಕರ್ ಸಿಂಗ್ ಅವರು ನೆನಪಾಗುತ್ತಿದ್ದಾರೆ.

ನಾನು ಪ್ರೈಮರಿ ನಾಲ್ಕನೇ ತರಗತಿಯ ವಿದ್ಯಾರ್ಥಿಯಾಗಿದ್ದಾಗ 'ಜಗನ್ಮೋಹಿನಿ' ಚಿತ್ರ ಹಾಸನದ 'ಪಿಕ್ಚರ್ ಪ್ಯಾಲೇಸ್' ಥಿಯೇಟರ್‌ನಲ್ಲಿ ಪ್ರದರ್ಶನಗೊಂಡು ಪ್ರೇಕ್ಷಕರನ್ನು ಭರದಿಂದ ಸೆಳೆಯುತ್ತಿತ್ತು. 'ಜಗನ್ಮೋಹಿನಿ' ಐವತ್ತು ದಿನಗಳ ಭರ್ಜರಿ ಪ್ರದರ್ಶನದ ಸಮೀಪಕ್ಕೆ ಬಂದಾಗ 'ಪಿಕ್ಚರ್ ಪ್ಯಾಲೇಸ್' ಮಾಲೀಕರಾದ ನನ್ನ ತಂದೆ ಎಂ.ಆರ್. ಪುಟ್ಟಸ್ವಾಮಯ್ಯನವರು ಚಿತ್ರದ ನಿರ್ಮಾಪಕ ಶಂಕರಸಿಂಗ್‌ರನ್ನು ಅವರನ್ನು, 'ತಮ್ಮ ಪತ್ನಿ ಹಾಗೂ ಜಗನ್ಮೋಹಿನಿ ಚಿತ್ರದ 'ಗೌರಿ' ಪಾತ್ರಧಾರಿಯಾದ ಪ್ರತಿಮಾದೇವಿಯವರೊಡನೆ ನಮ್ಮೂರಿಗೆ ಬರಬೇಕು, ನಿಮ್ಮನ್ನು ನೋಡಲು ನಮ್ಮೂರಿನ ಮಹಾಜನರು ಕಾತುರರಾಗಿದ್ದಾರೆ' ಎಂದು ಕೇಳಿಕೊಂಡರು. ಶಂಕರ್‌ಸಿಂಗ್‌ರವರು ಅರಸೀಕೆರೆಯವರೇ ಆಗಿದ್ದುದರಿಂದ ಕೂಡಲೇ ಒಪ್ಪಿಕೊಂಡರು.

ಕನ್ನಡ ಚಿತ್ರಗಳ ನಿರ್ಮಾಣವೇ ಕಷ್ಟವಾಗಿದ್ದ ಅಂದಿನ ದಿನಗಳಲ್ಲಿ 'ಜಗನ್ಮೋಹಿನಿ' ಚಿತ್ರ ಐವತ್ತು ದಿನಗಳ ಪ್ರದರ್ಶನ ಕಂಡಿದ್ದು ನಿಜಕ್ಕೂ ಅಪೂರ್ವ ಸಂಗತಿ. ಅಂದು ನೆಚ್ಚಿನ ನಟನ ಚಿತ್ರ ಐವತ್ತು ದಿನಗಳನ್ನು ಕಂಡಿತೆಂದು ದೊಡ್ಡ ಹೊಳೆವ ನಕ್ಷತ್ರವನ್ನು ಭಾಜಾಭಜಂತ್ರಿಯೊಂದಿಗೆ ತಂದು ಥಿಯೇಟರ್‌ನಲ್ಲಿ ಇಡುವ ಅಭಿಮಾನಿ ಬಳಗವಿರುತ್ತಿರಲಿಲ್ಲ. ಪ್ರದರ್ಶಿತವಾಗುತ್ತಿರುವ ಮತ್ತು ಮುಂಬರುವ ಚಿತ್ರಗಳ ಫೋಟೋಕಾರ್ಡ್‌ಗಳನ್ನು ಚಿತ್ರಮಂದಿರಗಳಲ್ಲಿ ಪ್ರದರ್ಶಿಸುತ್ತಿದ್ದರು. ಸಿನಿಮಾ ತೆರೆಯ ಮೇಲೆ, ಮುಂದೆ ಬರುವ ಚಿತ್ರಗಳ ಬಗ್ಗೆ ಸ್ಲೈಡ್‌ಗಳ ಪ್ರದರ್ಶನ, ಮಧ್ಯ ವಿರಾಮದಲ್ಲಿ ಹಾಲಿ ನಡೆಯುತ್ತಿರುವ ಚಿತ್ರದ ಕಥೆ, ಹಾಡುಗಳ ಪುಸ್ತಕಗಳ ಮಾರಾಟ, ಇಷ್ಟು ನಡೆಯುತ್ತಿತ್ತು. ಎತ್ತಿನ ಗಾಡಿಯಲ್ಲಿ ಬ್ಯಾಂಡ್ ಬಾರಿಸಿಕೊಂಡು ಹಾಲಿ ನಡೆಯುತ್ತಿರುವ ಸಿನಿಮಾದ ಬಗ್ಗೆ ಕರಪತ್ರ ಹಂಚುವುದರೊಂದಿಗೆ ನಡೆಯುತ್ತಿರುವ ಚಿತ್ರದ ಬಗ್ಗೆ ಪ್ರಚಾರ, ಇಷ್ಟೆ. ಇನ್ನು ನಟ ನಟಿಯರನ್ನು ಸಾಕ್ಷಾತ್ತಾಗಿ ನೋಡುವುದು ಊಹೆಗೆ ನಿಲುಕದ್ದು. ಹೀಗಿರುವಾಗ ಶಂಕರ್‌ಸಿಂಗ್‌ರವರು ತಮ್ಮ ತಾರಾಪತ್ನಿ ಪ್ರತಿಮಾದೇವಿಯವರೊಡನೆ ಥಿಯೇಟರ್‌ಗೆ ಬಂದು ನಮ್ಮೂರಿನ ಮಹಾಜನಗಳಿಗೆ ಕೈ ಮುಗಿದರು. ಹಾರ ಹಾಕಿಸಿಕೊಂಡರು. ನಮ್ಮ ಮನೆಗೂ ಆತ್ಮೀಯ ಬಂಧುಗಳಾಗಿ ಬಂದು ನಮ್ಮ ತಾಯಿಯವರ ಸತ್ಕಾರ ಸ್ವೀಕರಿಸಿದರು.

ಹೀಗಿತ್ತು ಅಂದಿನ ಸಿನಿಮಾರಂಗದವರ ಸರಳತೆ.

ಶಂಕರ್‌ಸಿಂಗ್ ಅವರು ತಮ್ಮ ಸುಪ್ರಸಿದ್ಧ 'ಜಗನ್ಮೋಹಿನಿ' ಚಿತ್ರದ ಜೊತೆಗೆ 'ಶ್ರೀನಿವಾಸ ಕಲ್ಯಾಣ', 'ಶಿವಶರಣೆ ನಂಬಿಯಕ್ಕ', 'ದಲ್ಲಾಳಿ', 'ಮುಟ್ಟಿದ್ದೆಲ್ಲಾ ಚಿನ್ನ' ಮತ್ತು 'ಯೂಕಿ



ಮಗಳು ವಿಜಯಲಕ್ಷ್ಮಿಯೊಂದಿಗೆ ಅಮ್ಮ ಪ್ರತಿಮಾದೇವಿ ಸಂಗ್ರಹ ಚಿತ್ರ: ಡಿ.ಸಿ. ನಾಗೇಶ್